**<u>ದಿನಾಂಕಃ 10-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಲಾಯಿತು</u>**

**<u>ಮುಂದುವರೆದ ಪಾಟೀ ಸವಾಲು ಪ್ರತಿವಾದಿಗಳ ಪರ ಶ್ರೀ ಎಸ್.ವಿ.ಜೆ ವಕೀಲರಿಂದಃ</u>**

4. ನಮ್ಮ ತಂದೆಗೆ ನಾವು 3 ಜನ ಗಂಡು ಮಕ್ಕಳು, 2 ಜನ ಹೆಣ್ಣು ಮಕ್ಕಳು ಇರುತ್ತಾರೆ. 2 ಮತ್ತು 3 ನೇ ವಾದಿಯರು ನನ್ನ ತಂಗಿಯಾಗಬೇಕು. 4 ಮತ್ತು 5 ನೇ ವಾದಿಯರು ತಮ್ಮ ಹೆಂಡತಿ ಮತ್ತು ತಮ್ಮನ ಮಗಳು ಆಗಬೇಕು. 6 ನೇ ವಾದಿಯು ನನ್ನ ತಮ್ಮನಾಗಬೇಕು. ವಾದ ಪತ್ರದ ವಂಶಾವಳಿಯಲ್ಲಿ 2 ರಿಂದ 6 ನೇ ವಾದಿಯರನ್ನು ತೋರಿಸಿಲ್ಲ ಎಂದರೆ ಸಾಕ್ಷಿಯು ಸದರಿಯವರನ್ನು ಪಕ್ಷಗಾರರನ್ನಾಗಿ ಸೇರ್ಪಡೆ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ದಾವೆಯಲ್ಲಿ 2 ರಿಂದ 6 ನೇ ವಾದಿಯರು ಸಹಿ ಮಾಡಿಲ್ಲ ಎಂದರೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ತಿದ್ದುಪಡೆ ವಾದ ಪತ್ರವನ್ನು ತೋರಿಸಲಾಗಿ ಸದರಿ ವಾದ ಪತ್ರದಲ್ಲಿ 2 ರಿಂದ 6 ನೇ ವಾದಿಯರ ಸಹಿ ಇಲ್ಲ ಎಂದರೆ ಸಾಕ್ಷಿಯು ಸಮ್ಮನೆ ಇರುತ್ತಾರೆ.

5. 2 ರಿಂದ 6 ನೇ ವಾದಿಯರು ನನಗೆ ದಾವೆ ಸಲ್ಲಿಸಲು ಅಧಿಕಾರ ಪತ್ರವನ್ನು ನೀಡಿರುವುದಿಲ್ಲ. ಸನ್ 2010 ರಲ್ಲಿ ಸೋಮರಾಯ ಹಿಪ್ಪರಗಿ ತೀರಿಕೊಂಡಿರುತ್ತಾರೆ. ಸದರಿಯವರು ದಾವೆ ಸಲ್ಲಿಸುವ ಮುಂಚೆ ತೀರಿಕೊಂಡಿರುತ್ತಾರೆ. ಸದರಿಯವರು ತೀರಿಕೊಂಡ ಬಗ್ಗೆ ಈ ದಾವೆಯಲ್ಲಿ ನಮೂದಿಸಿರುವುದಿಲ್ಲ. ಸರ್ವೆ ನಂ.78/2 ವಾಟ್ನಿ ಮೂಲಕ ಬಂದಿರುತ್ತದೆ ಎಂದರೆ ಸರಿ. ಸದರಿ ವಾಟ್ನಿ ಸನ್ 1995 ರಲ್ಲಿ ಆಗಿರುತ್ತದೆ ಎಂದರೆ ಸರಿ. ಸದರಿ ಆಸ್ತಿಯನ್ನು 3 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತೇನೆ ಎಂದರೆ ಸರಿ, ಸಾಕ್ಷಿ ಮುಂದುವರೆದು ದಾವಾ ಆಸ್ತಿಯನ್ನು ಉಳಿಸುವಗೋಸ್ಕರ ನನ್ನ ಚಿಕ್ಕಪ್ಪ ಮಾರಾಟ ಮಾಡಿರುತ್ತಾನೆ ಎಂದು ನುಡಿಯುತ್ತಾರೆ. ಸದರಿ ಆಸ್ತಿಯನ್ನು ಎಷ್ಟು ಹಣಕ್ಕೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ನನ್ನ ಚಿಕ್ಕಪ್ಪ ಮಾರಾಟ ಮಾಡಿರುವ ಕಾರಣ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

6. ಸಾಕ್ಷಿಗೆ ನಿಪಿ-2 ತೋರಿಸಿದ್ದು, ಸದರಿ ನಿಪಿ-2 ರಲ್ಲಿ 70,000/- ಮಾರಾಟ ಮಾಡಲಾಗಿರುತ್ತದೆ ಎಂದರೆ ಸಾಕ್ಷಿಯು ಚಿಕ್ಕಪ್ಪ ಮಾರಾಟ ಮಾಡಿರುತ್ತಾರೆ ಎಂದು

ನುಡಿಯುತ್ತಾರೆ. ನಿಪಿ-2 ರಲ್ಲಿ ಹಣವನು ನಮಗೆ ನೀಡಲಾಗಿದೆ ಎಂದರೆ ಸಾಕ್ಷಿಯು ಕಾಗದ ಪತ್ರದಲ್ಲಿ ಬರೆಯಲಾಗಿದೆ ಹಣವನ್ನು ನನ್ನ ಚಿಕ್ಕಪ್ಪ ತೆಗೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ.

7. ನಿಡಿ-2 ರಂತೆ ಸರ್ವೆ ನಂ.31 ಕ್ಷೇತ್ರ 5 ಎಕರೆ 26 ಗುಂಟೆ ಜಮೀನನ್ನು ಸನ್ 1982 ರಲ್ಲಿ ನನ್ನ ಹೆಸರಿಗೆ ಸರ್ಕಾರದವರು ನೀಡಿರುತ್ತಾರೆ ಎಂದರೆ ಸರಿ. ಸದರಿ ಆಸ್ತಿ ನನಗೆ ಜಮೀನು ಇಲ್ಲದ ಕಾರಣ ನನಗೆ ನೀಡಲಾಗಿರುತ್ತದೆ ಎಂದರೆ ಸರಿ. ಜಮೀನು ಮಂಜೂರಾಗುವ ಮುಂಚೆ ನನ್ನ ಹಾಗೂ ನನ್ನ ಚಿಕ್ಕಪ್ಪನ ನಡುವೆ ವಾಟ್ನಿ ಆಗಿರಲ್ಲಿಲ್ಲಾ ಎಂದರೆ ಸರಿ. ಜಮೀನು ಇಲ್ಲದವರಿಗೆ ಮಾತ್ರ ಸರ್ಕಾರ ಜಮೀನು ನೀಡುತ್ತಾರೆ, ನಾನು ಮೋಸದಿಂದ ಜಮೀನು ಮಾಡಿಕೊಂಡಿರುತ್ತೇನೆ ಎಂದರೆ ಸಾಕ್ಷಿಯು ಆ ಸಮಯದಲ್ಲಿ ನನ್ನ ಹೆಸರಿಗೆ ಜಮೀನು ಇಲ್ಲದ ಕಾರಣ ಸರ್ಕಾರದವರು ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಜಮೀನನ್ನು ಸನ್ 2004 ರಲ್ಲಿ ಮಾರಾಟ ಮಾಡಿರುತ್ತೇನೆ ಎಂದರೆ ಸರಿ.

8. ಸರ್ವೆ ನಂ.7 ನನ್ನ ಚಿಕ್ಕಪ್ಪ ಖರೀದಿ ಮಾಡಿದ ಆಸ್ತಿ ಎಂದರೆ ಸರಿ, ಸಾಕ್ಷಿ ಮುಂದುವರೆದ ನನ್ನ ಚಿಕ್ಕಪ್ಪ ಕುಟುಂಬದ ಮುಖ್ಯಸ್ಥನಾಗಿರುವ ಕಾರಣ ಖರೀದಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಆಸ್ತಿಯು ಸನ್ 1968 ರಲ್ಲಿ ಖರೀದಿ ಮಾಡಿರುತ್ತಾರೆ. ನನ್ನ ಅಜ್ಜ ರಾಮಪ್ಪ ಹಿಪ್ಪರಗಿ ಸನ್ 1977 ರಲ್ಲಿ ತೀರಿಕೊಂಡಿರುತ್ತಾರೆ. ಸದರಿ ಆಸ್ತಿ ಖರೀದಿ ಮಾಡಿದಾಗ ನನ್ನ ತಂದೆ ಮತ್ತು ನನ್ನ ಅಜ್ಜ ಜೀವಂತ ಇದ್ದರು. ನನ್ನ ತಂದೆ ಮತ್ತು ನನ್ನ ಅಜ್ಜ ಜೀವಂತ ಇರುವಾಗಲೆ ನನ್ನ ಚಿಕ್ಕಪ್ಪ ಕಿರಾಣಿ ಅಂಗಡಿಯನ್ನು ಸನ್ 1960 ರಲ್ಲಿ ಹಾಕಿಕೊಂಡಿದ್ದರು ಎಂದರೆ ಸಾಕ್ಷಿಯು ಸನ್ 1955 ರಿಂದಲೆ ನನ್ನ ಚಿಕ್ಕಪ್ಪ ಹಾಕಿಕೊಂಡಿದ್ದರು ಎಂದು ನುಡಿಯುತ್ತಾರೆ.

9. ನನ್ನ ಚಿಕ್ಕಪ್ಪನ ಹೆಸರಿನಲ್ಲಿ ಕಿರಾಣಿ ಅಂಗಡಿ ನಡೆಸಲು ಲೈಸೆನ್ಸ ಇತ್ತು ಎಂದರೆ ಸರಿ. ಕಿರಾಣಿ ಅಂಗಡಿಯಿಂದ ನನ್ನ ಚಿಕ್ಕಪ್ಪನಿಗೆ ಸಾಕಷ್ಟು ಆದಾಯ ಇತ್ತು ಎಂದರೆ ಸಾಕ್ಷಿಯು ಕಿರಾಣಿ ಅಂಗಡಿಯ ಉತ್ಪನ್ನ ಮತ್ತು ಉಳುಮೆ ಮಾಡಿದ ಉತ್ಪನ್ನ ನನ್ನ ಚಿಕ್ಕನ ಬಳಿ ಇತ್ತು ಎಂದು ನುಡಿಯುತ್ತಾರೆ. ನನ್ನ ಮನೆಯ ಕುಟುಂಬವನ್ನು ನನ್ನ ಅಜ್ಜ ನೋಡಿಕೊಳ್ಳುತ್ತಿದ್ದ ಎಂದರೆ

ಸಾಕ್ಷಿಯು ನನ್ನ ಚಿಕ್ಕಪ್ಪ ನೋಡಿಕೊಳ್ಳುತ್ತಿದ್ದ ಎಂದು ನುಡಿಯುತ್ತಾರೆ. ನನ್ನ ಚಿಕ್ಕಪ್ಪ ಕುಟುಂಬದ ವ್ಯವಹಾರವನ್ನು ನೋಡಿಕೊಳ್ಳುತ್ತಿದ್ದ ಎಂದು ನನ್ನ ಅನಕೂಲಕ್ಕೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

10. ನಮ್ಮ ಮನೆತನಕ್ಕೆ ಯಾವುದೇ ಪಿತ್ರಾರ್ಜಿತ ಮನೆ ಇರುವುದಿಲ್ಲ. ಎಲ್ಲ ದುಡಿದು ಖರೀದಿಸಿದ ಆಸ್ತಿ ಆಗಿರುತ್ತದು ಎಂದು ನುಡಿಯುತ್ತಾರೆ. ಒಟ್ಟು 4 ಮನೆ ಖರೀದಿ ಮಾಡಿದ ಆಸ್ತಿಗಳು ಆಗಿರುತ್ತವೆ. ನಮ್ಮ ತಂದೆಯ ಹೆರಿನಲ್ಲಿ ಇರುವ VPC No.162, ನನ್ನ ಚಿಕ್ಕಪ್ಪನ ಹೆಸರಿನಲ್ಲಿ ಇರುವ VPC 162/ಎ ಮತ್ತು 162/ಬಿ ಇರುತ್ತದೆ. VPC 162/ಎ ದಲ್ಲಿ ನಾವು ಇರುತ್ತೇವೆ. VPC 162/ಬಿ ದಲ್ಲಿ ನನ್ನ ಚಿಕ್ಕಪ್ಪ ವಾಸವಾಗಿರುತ್ತಾರೆ. ಸದರಿ ಮನೆ ವಾಟ್ನಿಯಾಗುವ ಸಮಯದಲ್ಲಿ ಎ ಮತ್ತು ಬಿ ಆಗಿರುತ್ತದೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಚಿಕ್ಕಪ್ಪ ವಾಟ್ನಿಯಾಗಿ ಬೇರೆ ಬೇರೆಯಾಗಿರುತ್ತೇವೆ ಎಂದರೆ ಸರಿಯಲ್ಲ. ವಾಟ್ನಿಯಾಗಿ ಬೇರೆ ಬೇರೆಯಾಗಿ 35 ವರ್ಷಗಳು ಆಗಿರುತ್ತವೆ ಎಂದರೆ ಸಾಕ್ಷಿಯು ನಾವು ಮಾಡಿಕೊಂಡಿರುವುದಿಲ್ಲ ಮೊದಲೆ ಬೇರೆ ಬೇರೆಯಾಗಿರುತ್ತವೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯಲ್ಲಿ ವಿಭಾಗವಾಗಿದ್ದರು ಸಹ ಪ್ರತಿವಾದಯರಿಂದ ಆಸ್ತಿ ಪಡೆದುಕೊಳ್ಳುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಅದೆ.**

**(ಶ್ರೀ ಅಮಿತ್ ಘಟ್ಟಿ)**
**ದಿವಾಣಿ ನ್ಯಾಯಾಧೀಶರು ಮತ್ತು**
**ನ್ಯಾಯಿಕ ದಂಡಾಧಿಕಾರಿಗಳು**

ಓ.ಎಸ್‌ಃ 381/2010

ಪಿ.ಡಬ್ಲ್ಯೂಃ 01

**ಬಸವನ ಬಾಗೇವಾಡಿ.**